ಸಾರ್ವಕಾಲಿಕತೆ ಜಾನಪದ ಕಾವ್ಯಕ್ಕಿದೆ. ಕಾರಣವೆಂದರೆ, ಜಾನಪದ ಕವಿಗೆ ರೊಮ್ಯಾಂಟಿಕ್ ಕವಿಯ ಅಹಂಭಾವ ಇರುವುದಿಲ್ಲ.

ಅನುಭವದ ಸ್ವರೂಪ

ಅದೇನೇ ಇದ್ದರೂ ಜಾನಪದ ಕಾವ್ಯ ಜೀವನದ ಮೌಲ್ಯಗಳನ್ನು ಗ್ರಹಿಸಿ ಅವುಗಳಿಗೆ ಅಭಿವ್ಯಕ್ತಿಯನ್ನು ಕೊಡುವ ರೀತಿ ಮೋಜಿನದಾಗಿದೆ. ಶ್ರೇಷ್ಠವಾದ ಅಭಿಜಾತ ಕಾವ್ಯದಲ್ಲಿ ಮೌಲ್ಯಗಳು ಕೇವಲ ಸೂಚ್ಯವಾಗಿ ಬರುತ್ತವೆಯೇ ಹೊರತು ಪ್ರಕಟವಾಗಿಯಲ್ಲ. ನಮ್ಮ ಮಹಾಕಾವ್ಯಗಳಲ್ಲಿ ಅರ್ಥಾಂತರನ್ಯಾಸ ಒಂದು ಅಲಂಕಾರವಿರುವುದೂ ಇದೇ ಕಾರಣಕ್ಕಾಗಿ. ಅರ್ಥಾಂತರನ್ಯಾಸಗಳಿದ್ದರೆ ಆ ಕೃತಿಯನ್ನು ನೀತಿಪರ ಕಾವ್ಯವೆಂದು ಕರೆಯಬೇಕಾಗಿಲ್ಲ. ಕಾವ್ಯದ ಅನುಭವ ವಿಶೇಷವೆಲ್ಲ ಅಭಿವ್ಯಕ್ತಿಯ ಪ್ರತಿಕ್ರಿಯೆಯಲ್ಲಿ ಸಾಮಾನ್ಯವಾದ ಸತ್ಯದಲ್ಲಿ ಪರಿಣಾಮ ಹೊಂದುವುದನ್ನು ಈ ಅಲಂಕಾರಗಳು ಸೂಚಿಸುತ್ತವೆ. ಕಾಳಿದಾಸನ 'ಕುಮಾರ ಸಂಭವ'ದಿಂದ ಉದಾಹಣೆಗಳನ್ನು ಆಯ್ದುಕೊಡಬಹುದಾದರೂ ಈ ಚರ್ಚೆ ಅಷ್ಟು ಪ್ರಸ್ತುತವಾಗಿಲ್ಲ. ಜಾನಪದ ಕಾವ್ಯ ಮೌಲ್ಯಗಳನ್ನು ಅನುಭವದ ರೂಪದಲ್ಲಿಯೇ ಗ್ರಹಿಸುತ್ತದೆ. ಸರಳವಾದ ಮೌಲ್ಯಗಳು ಅನುಭವದಲ್ಲಿ ಸೇರಿಹೋಗುವುದೂ ಅಷ್ಟೇ ಸರಳವಾಗಿರುತ್ತದೆ.

ಮಲ್ಲಿಗೆಯಂಥಾ ಮಗಳಿಗೆ ಎಲ್ಲಿತ್ತೊ ಒಗೆತನ
ಹುಲ್ಲಾಗ ಬೆಂಕಿ ಒಗಧಾಂಗ । ಗುಡ್ಡದ ।
ಕಲ್ಲಿಗೆ ಧಾರಿ ಎರಧಾಂಗ ।

ಇಂಥ ಉದಾಹರಣೆಗಳಲ್ಲಿ ಜೀವನಮೌಲ್ಯ ಇದೆಯೆಂಬ ಕಲ್ಪನೆ ಬರುವುದಿಲ್ಲ. ಮೌಲ್ಯಪ್ರಜ್ಞೆ ತಾಯಿ ಕರುಳಿನ ದನಿಯಲ್ಲಿ ಸೇರಿಕೊಂಡುಬಿಟ್ಟಿದೆ. ಈ ಮೊದಲೇ ಹೇಳಿದಂತೆ ಜಾನಪದ ಕಾವ್ಯದಲ್ಲಿ ಜೀವಂತವಾದ ದನಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ದನಿ ಕಾವ್ಯದ ತುಂಬ ವ್ಯಾಪಿಸಿ, ಮೈದೊಗಲಿನಂತೆ ಹೊಂದಿಕೊಂಡಿರುವುದರಿಂದ ದನಿಯೇ ಪ್ರಜ್ಞೆಯಾಗುತ್ತದೆ. ಸ್ಪರ್ಶೇಂದ್ರಿಯದಂತೆ ವ್ಯಾಪಕವೂ ಆಗಿರುತ್ತದೆ.

ಮೇಲೆ ಕೊಟ್ಟ ಉದಾಹಣೆಯಲ್ಲಿ ಮೌಲ್ಯಪ್ರಜ್ಞೆ ಸರಳವಾದದ್ದು. ಮಗಳ ಒಗೆತನ ಸುಖವಾಗಿಲ್ಲ, ಅವಳ ಗಂಡ ಅವಳನ್ನು ಪ್ರೀತಿಸುವುದಿಲ್ಲ. 'ಮಲ್ಲಿಗೆಯಂಥಾ ಮಗಳು' – ಅವಳಿಗೆ ದೊರೆತ ಒಗೆತನ ಯೋಗ್ಯವಾಗಿಲ್ಲ. ದಾಂಪತ್ಯದ ವಿಷಮತೆ ತಾಯಿಯ ಮನಸ್ಸನ್ನು ಕಲಕಿದೆ. ಅವಳು ತನ್ನ ದುಃಖವನ್ನು ತೋಡಿಕೊಳ್ಳುವಾಗ ಮಗಳ ಒಗೆತನವನ್ನು ವರ್ಣಿಸುವ ರೀತಿಯಲ್ಲಿ ಮೌಲ್ಯ ಪ್ರಜ್ಞೆ ಸೂಚಿತವಾಗಿದೆ. ಜಾನಪದ ಕಾವ್ಯ ಯಾವಾಗಲೂ ಇಂಥ ಸುಲಭವಾದ ಜೀವನಮೌಲ್ಯಗಳನ್ನು ಪ್ರಕಟಿಸುತ್ತದೆಂದು ತಿಳಿಯಬಾರದು. ಸಂಕೀರ್ಣವಾದ ಮೌಲ್ಯಗಳನ್ನು ಪ್ರಕಟಿಸುವ ವ್ಯಾಪಾರದಲ್ಲಿ ಕೂಡ ಈ ಕಾವ್ಯ ಯಶಸ್ವಿಯಾಗಿದೆ. ಆದರೆ ಇಂಥ ಕಠಿಣ ಪ್ರಯೋಗದಲ್ಲಿ ಕೂಡ ಅದು ತನ್ನ ಅಭಿವ್ಯಕ್ತಿಯ ರೀತಿಯನ್ನು ಬಿಟ್ಟುಕೊಡುವುದಿಲ್ಲವೆಂಬ ಮಾತು ಮಹತ್ವದ್ದಾಗಿದೆ.

## ಮಾನವೀಯ ಪ್ರಸಂಗ

ಕನ್ನಡದಲ್ಲಿ 'ಗೋವಿನ ಕಥೆ' ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿರುವ ಕವಿತೆಯಾಗಿದೆ. ಈ ಕವಿತೆ ಹೆಚ್ಚಾಗಿ ಮಕ್ಕಳಿಗೆ ನೀತಿಯನ್ನು ಕಲಿಸಲೆಂದು ಉಪಯೋಗವಾಗಿರುವುದರಿಂದ ಈ ಕವಿತೆಯನ್ನು ನಾವು ಗಂಭೀರವಾಗಿ ಅಭ್ಯಾಸ ಮಾಡಿಲ್ಲ. 'ಸತ್ಯವೇ ಪರಮಾತ್ಮನೆಂದಾ ಪುಣ್ಯಕೋಟಿಯ ಕಥೆಯಿದು.' 'ಸತ್ಯ'ದ ಅರ್ಥ ಪರಿಮಿತವಾಗಿರುವಾಗ ಇದು ನೀತಿಪರವಾದ ಕವಿತೆಯೆಂದೇ ತೋರಿದರೆ ಆಶ್ಚರ್ಯವಿಲ್ಲ. ಗೋವು ಮತ್ತು ಹುಲಿ ಈ ಎರಡು ಪ್ರಾಣಿಗಳ ಪಾತ್ರಗಳ ಅರ್ಥವಂತಿಕೆಯೂ ನಮಗೆ ಚೆನ್ನಾಗಿ ಗೊತ್ತು. ಪುಣ್ಯಕೋಟಿ ಎಂಬ ಗೋವು ಹುಲಿಗೆ ತಿರುಗಿ ಬರುತ್ತೇನೆಂದು ಮಾತು ಕೊಟ್ಟು ಕೊಟ್ಟಿಗೆಗೆ ಬಂದು ತನ್ನ ಕರುವಿಗೆ ಮಾಡುವ ಉಪದೇಶ, ಕರುವನ್ನು ಬೀಳ್ಕೊಳ್ಳುವ ಪ್ರಸಂಗ ಇವು ಸಾಕಷ್ಟು ಹೃದಯಂಗಮವಾಗಿರುವುದರಿಂದ ಈ ಕವಿತೆಯ ಲೋಕಪ್ರಿಯತೆಗೆ ಕಾರಣವನ್ನು ದೂರ ಹುಡುಕಬೇಕಾದದ್ದಿಲ್ಲ.

'ಸತ್ಯವಾಕ್ಯಕೆ ತಪ್ಪಿ ನಡೆದರೆ ಮೆಚ್ಚನಾ ಪರಮಾತ್ಮನು.' ಕವಿತೆ ಉಸುರುವ ನೀತಿವಾಕ್ಯ ಇದು. ಆದರೆ ಕವಿತೆಯ ಅರ್ಥ ಈ ನೀತಿವಾಕ್ಯಕ್ಕಷ್ಟೇ ಸೀಮಿತವಾಗಿದೆಯೇ ಎಂಬ ಪ್ರಶ್ನೆಯೊಂದಿದೆ.